ನನ್ನ ಓದು

# ಪು.ತಿ.ನ. ಮಲೆದೇಗುಲ

## ಅರಿವು ಇರವುಗಳ ಸನ್ನೆಗೈ



ರಾಜೇಂದ್ರ ಚೆನ್ನಿ

ತೇಜಶ್ರೀಯವರದು ಸದಾ ಪ್ರಯೋಗಶೀಲವಾದ ಸೃಜನಶೀಲತೆಯಾಗಿದೆ. ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ರೂಢಿಯಲ್ಲಿರುವ ಮಾದರಿಗಳನ್ನು ಮುರಿದು ಹೊಸ ಸಾಧ್ಯತೆಗಳನ್ನು ಹುಡುಕುವುದು ಅವರ ದಾರಿಯಾಗಿದೆ. ಹಾಗೆಯೆ ಪು.ತಿ.ನ. ಅವರ 'ಮಲೆದೇಗುಲ' ಕಾವ್ಯದ ಕುರಿತ ಈ ಕೃತಿಯೂ ವಿಶಿಷ್ಟವಾದ ರಚನೆಯನ್ನು ಹೊಂದಿದೆ. ಒಂದು ಬಹು ಅರ್ಥಪೂರ್ಣವಾದ ಪ್ರವೇಶಿಕೆಯ ನಂತರ 'ಮಲೆದೇಗುಲ' ಕಾವ್ಯದ 51 ಮುಕ್ತಕಗಳ ವಿವರಣೆ ಹಾಗೂ ವ್ಯಾಖ್ಯಾನಗಳು ಇಲ್ಲಿವೆ. ಅಲ್ಲದೆ ಪ್ರತಿಯೊಂದು ಮುಕ್ತಕದ ವಿವರಣೆಯ ಕೊನೆಗೆ ಮುಕ್ತಕದಲ್ಲಿ ಬರುವ ಮುಖ್ಯ ಪದಗಳ ಹಾಗೂ ಪರಿಕಲ್ಪನೆಗಳ ವಿವರಣೆಗಳು ಕೂಡ ಇವೆ. ಮೇಲುನೋಟಕ್ಕೆ ಈ ಕೃತಿಯ ಉದ್ದೇಶವು ಅಷ್ಟೇನೂ ಸುಲಭವಲ್ಲದ ಕಾವ್ಯವೊಂದರ ವಿವರಣೆ ಮತ್ತು interpretation ಆಗಿ ಕಾಣುತ್ತದೆ. ಇದಕ್ಕೆ ಪೂರಕವಾಗಿ ತೇಜಶ್ರೀ ತಮ್ಮ ವ್ಯಾಖ್ಯಾನಗಳನ್ನು ಕೃತಿನಿಷ್ಠವಾಗಿ ಇರುವಂತೆ ಮಿತಗೊಳಿಸಿದ್ದಾರೆ. ಹೀಗಾಗಿ ಇದು ಪದ್ಯಭಾಗವೊಂದನ್ನು ನೆಪವಾಗಿಟ್ಟುಕೊಂಡು ವ್ಯಾಖ್ಯಾನಕಾರರು ತಮ್ಮ ವಿಚಾರಗಳನ್ನು ತಂದಿಡುವ ಮಾದರಿಯನ್ನು ಎಚ್ಚರದಿಂದ ದೂರವಿಟ್ಟಿದೆ.

ಯಾವ ಕವಿಗೂ ಕಮ್ಮಿಯಲ್ಲದ ತಾತ್ವಿಕ ಜಿಜ್ಞಾಸೆಯ ಪ್ರತಿಭೆಯುಳ್ಳ ತೇಜಶ್ರೀ, ಪು.ತಿ.ನ. ಅವರ ಸಂಕೀರ್ಣವೂ, ವಿಭಿನ್ನವೂ ಆಗಿರುವ ತಾತ್ವಿಕ ಚಿಂತನೆಯು ಕಾವ್ಯವಾಗಿ ಶರೀರ ಪಡೆದದ್ದನ್ನು ಸೂಚ್ಯವಾಗಿ ತೋರಿಸುತ್ತಾ ಹೋಗುತ್ತಾರೆ. ಅಲ್ಲಲ್ಲಿ ಮಾತ್ರ ತಮ್ಮದು ಎನ್ನಬಹುದಾದ ಚಿಂತನೆಯನ್ನು ಹೃಸ್ವವಾಗಿ ಮಂಡಿಸುತ್ತಾರೆ. ಆದರೆ ಸೂಕ್ಷ್ಮವಾಗಿ ನೋಡಿದರೆ ಪ್ರತಿಯೊಂದು ವ್ಯಾಖ್ಯಾನದ ಕೊನೆಯ ಭಾಗದಲ್ಲಿ ತೇಜಶ್ರೀ ಕಾವ್ಯ, ಬುದ್ಧಿ, ಭಾವ ಇವುಗಳನ್ನು ಕುರಿತು ತಮ್ಮ ಸ್ವಂತದ ಹುಡುಕಾಟದ ಎಳೆಗಳನ್ನು ಪ್ರಸ್ತಾಪಿಸುತ್ತಾರೆ. ಪು.ತಿ.ನ. ಅವರಿಗೆ ಕಾವ್ಯವು ತನ್ನಲ್ಲೇ ಶ್ರೇಷ್ಠವಾದ ಮೌಲ್ಯವಾಗಿದ್ದರೂ ಅದು ಮೊದಲ ಮೆಟ್ಟಿಲು ಮಾತ್ರ. ಅದನ್ನು ಹತ್ತಿ ಹೋದರೆ ಮುಂದೆ 'ರಸಸ್ಥಿತಿ' ಆಮೇಲೆ 'ಮೌನ' ಇವುಗಳಿವೆ. ತೇಜಶ್ರೀಗೆ ಕಾವ್ಯವು ಮೆಟ್ಟಿಲೂ ಹೌದು, ನಿಚ್ಚಣಿಕೆಯೂ ಹೌದು, ಅಲ್ಲದೇ ಅದೇ ಒಂದು ಅಂತಿಮ ಮೌಲ್ಯವೂ ಆಗಿರಬಹುದೆನ್ನುವ ನಂಬಿಕೆ ಇದೆ. ಹೀಗಾಗಿ ಈ ಭಾಗಗಳಲ್ಲಿ ಇದು ಕಾವ್ಯವಲ್ಲವೆ? ಇದು ಕಾವ್ಯದ ಅನುಭವವಲ್ಲವೇ ಎನ್ನುವ ಪ್ರಶ್ನೆಗಳು/ಉದ್ಗಾರಗಳು ಇವೆ. ಆದ್ದರಿಂದ ನಾನು ಈ ಕೃತಿಯನ್ನು ಇಬ್ಬರು ಕವಿಗಳ ನಡುವಿನ ಸಂವಾದವಾಗಿ ನೋಡುತ್ತೇನೆ. ಮೆಚ್ಚುಗೆ ಹಾಗೂ ಆದರದಿಂದ ಹಿರಿಯ ಕವಿಯೊಬ್ಬರನ್ನು ಓದುತ್ತ ವ್ಯಾಖ್ಯಾನಿಸುತ್ತಲೇ ತನ್ನ ಕಾಳಜಿಗಳನ್ನು ಈ ಕವಿ ಹೇಳುತ್ತಿರುವುದು ಈ ಸಂವಾದದ ಲಕ್ಷಣವಾಗಿದೆ. ಒಂದು muted conversation ಎನ್ನುತ್ತೇವಲ್ಲ, ಆ ಬಗೆಯ ಸಂವಾದವಿದಾಗಿದೆ.